**ದಿನಾಂಕ ಃ 06.12.2024**
**(ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.)**
**ಆರ್.ಡಬ್ಲ್ಯೂ - 1**

## ಮಧ್ಯಂತರ ಅರ್ಜಿ 1 ರ ಮೇಲೆ ವಿಚಾರಣೆ

**ಮುಖ್ಯ ವಿಚಾರಣೆಃ 1ನೇ ಎದುರುದಾರರ ಪರ ಶ್ರೀ.ಬಿ.ಪಿ.ಆರ್. ವಕೀಲರಿಂದಃ**

ಈ ದಿವಸ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ. ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕೆಂದು ಪ್ರಾರ್ಥಿಸುತ್ತೇನೆ. ಈ ದಾಖಲೆಗಳನ್ನು ಕೆಳಕಂಡಂತೆ ನಿಶಾನೆಗಳನ್ನಾಗಿ ಗುರುತಿಸಲಾಗಿದೆ.

| | |
|---|---|
| ನಿ.ಆರ್.1 | ದಿಃ03.01.2014 ರ ಕ್ರಯದ ಕರಾರು ಪತ್ರದ ದೃಢೀಕೃತ ನಕಲು. |
| ನಿ.ಆರ್.2 | ದಿಃ06.07.2013 ರ ಕ್ರಯ ಪತ್ರದ ದೃಢೀಕೃತ ನಕಲು. |
| ನಿ.ಆರ್.3 | ದಿಃ31.01.2013 ರ ಶುದ್ಧ ಕ್ರಯದ ತಿದ್ದುಪಡಿ ಪತ್ರದ ದೃಢೀಕೃತ ನಕಲು. |
| ನಿ.ಆರ್.4 | ದಿಃ10.10.2013 ರ ಕ್ರಯ ಪತ್ರದ ದೃಢೀಕೃತ ನಕಲು. |
| ನಿ.ಆರ್.5 | ದಿಃ17.06.2015 ರ ಲೀಗಲ್ ನೋಟಿಸಿನ ದೃಢೀಕೃತ ನಕಲು. |
| ನಿ.ಆರ್.5ಎ | ಅಂಚೆ ರಶೀದಿಯ ದೃಢೀಕೃತ ನಕಲು. |
| ನಿ.ಆರ್.5ಬಿ | ವಾಪಸ್ಸು ಆದ ಅಂಚೆ ಲಕೋಟೆಯ ದೃಢೀಕೃತ ನಕಲು. |
| ನಿ.ಆರ್.6 | ಓ.ಎಸ್. 180/15 ರ ದಾವಾ ಪತ್ರದ ದೃಢೀಕೃತ ನಕಲು. |
| ನಿ.ಆರ್.7 | ಓ.ಎಸ್. 180/15 ರಲ್ಲಿ ಸಾಕ್ಷಿಯು ಕೊಟ್ಟಿರುವ ಹೇಳಿಕೆಯ ದೃಢೀಕೃತ ನಕಲು. (ಆರ್.ಡಬ್ಲ್ಯೂ .1) |
| ನಿ.ಆರ್.8 | ಓ.ಎಸ್. 180/15 ರಲ್ಲಿ ಕಿರಣ್ ಕುಮಾರ್ ರವರು ಕೊಟ್ಟಿರುವ ಹೇಳಿಕೆಯ ದೃಢೀಕೃತ ನಕಲು. |
| ನಿ.ಆರ್.9 | ಓ.ಎಸ್.180/15 ರಲ್ಲಿ ದಿಃ27.01.2016 ರ ತೀರ್ಪಿನ ದೃಢೀಕೃತ ನಕಲು. |
| ನಿ.ಆರ್.10 | ಓ.ಎಸ್.180/15 ರ ಡಿಕ್ರಿಯ ದೃಢೀಕೃತ ನಕಲು. |
| ನಿ.ಆರ್.11 | ಓ.ಎಸ್.180/15 ರ ಆಡರ್ ಶೀಟ್ ನ ದೃಢೀಕೃತ ನಕಲು. |
| ನಿ.ಆರ್.12 | ಎಕ್ಸಿಕ್ಯೂಷನ್ 12/16 ರ ಆಡರ್ ಶೀಟ್ ನ ದೃಢೀಕೃತ ನಕಲು. |
| ನಿ.ಆರ್.13 | ಎಕ್ಸಿಕ್ಯೂಷನ್ 12/16 ರ ಅರ್ಜಿಯ ದೃಢೀಕೃತ ನಕಲು. |
| ನಿ.ಆರ್.14 | ದಾವಾ ಸ್ವತ್ತನ್ನು ಸ್ವಾಧೀನಪಡಿಸಿಕೊಂಡ ಬಗ್ಗೆ ಸಲ್ಲಿಸಿದ ದೃಢೀಕೃತ ನಕಲು. |
| ನಿ.ಆರ್.15 | ಎಕ್ಸಿಕ್ಯೂಷನ್ 12/16 ರಲ್ಲಿ, 2ನೇ ಎದುರುದಾರರಿಗೆ ಕಳುಹಿಸಿರುವ |

| | |
|---|---|
| ರಿಂದ 17 | ನೋಟಿಸುಗಳ ದೃಢೀಕೃತ ನಕಲುಗಳು. |
| ನಿ.ಆರ್.18 ಮತ್ತು 19 | ಎಕ್ಸಿಕ್ಯೂಷನ್ 12/16 ರಲ್ಲಿ ಕಳುಹಿಸಿರುವ ವಾರೆಂಟ್ ನ ದೃಢೀಕೃತ ನಕಲುಗಳು. |
| ನಿ.ಆರ್.20 | ಗಣಕೀಕೃತ ಬಿ ಖಾತಾ ಪ್ರತಿ. |
| ನಿ.ಆರ್.21 | ಗಣಕೀಕೃತ ಋಣ ಭಾರ ಪ್ರಮಾಣ ಪತ್ರದ ಪ್ರತಿ. |

**{ಪಾಟೀ ಸವಾಲುಃ ಮೇಲ್ಮನವಿದಾರರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ ಮುಂದೂಡಲಾಯಿತು}**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ಮುಂದುವರೆದ ಮುಖ್ಯ ವಿಚಾರಣೆಗಾಗಿ 1ನೇ ಪಾರ್ಟಿ ಪರ ವಕೀಲರ ವಿನಂತಿಯ ಮೇರೆಗೆ ಮುಂದೂಡಲಾಯಿತು.**

**(2ನೇ ಪಾರ್ಟಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)**

**ಪಾಟೀ ಸವಾಲು ಃ 2ನೇ ಪಾರ್ಟಿ ಪರವಾಗಿ ಶ್ರೀ ಆರ್ ಕೆ ಎಸ್ ವಕೀಲರಿಂದ ಃ**

2. ದಿನಾಂಕಃ 28.02.2015 ರಿಂದ ನಾನು ಕರ್ತವ್ಯಕ್ಕೆ ಗೈರು ಹಾಜರಾಗಿದ್ದೇನೆಂದು

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ವಾಟೀ ಸವಾಲು ಃ**

(ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ವಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

**ದಿನಾಂಕ ಃ 15.09.2022.**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ ಡಬ್ಲ್ಯೂ - 1**

**ಪಾಟೀ ಸವಾಲು ಃ ಎದುರುದಾರರ ಪರ ಶ್ರೀ.ಬಿಪಿಆರ್., ವಕೀಲರಿಂದ ಃ**

2.2ನೇ ಎದುರುದಾರ 1ನೇ ಎದುರದಾರರಿಗೆ ಯಾವ ತಾರೀಖಿನಂದು ಖರೀದಿ ಒಪ್ಪಂದ ಪತ್ರ ಮಾಡಿಕೊಟ್ಟಿದ್ದರು ಎಂದು ಗೊತ್ತಾ ಅಂದರೆ ಗೊತ್ತಿಲ್ಲ. 1ನೇ ಎದುರುದಾರ 2ನೇ ಎದುರದಾರರ ವಿರುದ್ಧ ಯಾವಾಗ ದಾವಾ ಮಾಡಿದರು ಎಂದು ಗೊತ್ತಾ ಅಂದರೆ ಗೊತ್ತಿಲ್ಲ. ಆ ದಾವಾ ಮಾಡುವುದಕ್ಕಿಂತ ಮೊದಲು 1ನೇ ಎದುರುದಾರ 2ನೇ ಎದುರದಾರರಿಗೆ ಯಾವಾಗ ನೋಟೀಸ್ ನೀಡಿದ್ದರು ಎಂದು ಗೊತ್ತಾ ಅಂದರೆ ಗೊತ್ತಿಲ್ಲ.

3.ಇದೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು 2ನೇ ಎದುರುದಾರರ ವಿರುದ್ಧ ಒಂದು ದಾವಾ ಮಾಡಿದ್ದೆ ಅಂದರೆ ಸರಿ. 1ನೇ ಎದುರುದಾರ 2ನೇ ಎದುರುದಾರರ ವಿರುದ್ಧ ಮಾಡಿದ ದಾವೆ ಅವರ ಪರವಾಗಿ ಡಿಕ್ರಿಯಾಗಿತ್ತು ಅಂದರೆ ನನಗೆ ಗೊತ್ತಿಲ್ಲ.

4.ನಾನು ಮಾಡಿದ ದಾವೆಯಲ್ಲಿ 2ನೇ ಎದುರುದಾರನಿಗೆ ನೋಟೀಸ್ ಜಾರಿಯಾಗಿತ್ತಾ ಅಂದರೆ ಮಾಡಿಸಿದ್ದೆವು, ಆದರೆ ಅವರು ವಿಳಾಸದಲ್ಲಿರಲಿಲ್ಲ. 1ನೇ ಎದುರುದಾರ 2ನೇ ಎದುರದಾರರ ವಿರುದ್ಧ ಮಾಡಿದ ದಾವೆಯಲ್ಲಿ ಡಿಕ್ರಿಯಾದ ನಂತರ ಅವರು ಎಕ್ಸಿಕ್ಯೂಷನ್ ಪಿಟಿಷನ್ ದಾಖಲು ಮಾಡಿದ್ದರು ಅಂದರೆ ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು 1ನೇ ಎದುರುದಾರರು ಈ ಪ್ರಕರಣದ ತಕರಾರಿನಲ್ಲಿ ತಿಳಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲ.

5.1ನೇ ಎದುರುದಾರ 2ನೇ ಎದುರದಾರರ ವಿರುದ್ಧ ಮಾಡಿದ ದಾವೆಯಲ್ಲಿ ಸಮನ್ಸ 2ನೇ ಎದುರುದಾರರಿಗೆ ಜಾರಿಯಾಗಿದೆ ಅಂದರೆ ನನಗೆ ಗೊತ್ತಿಲ್ಲ. ನನಗೆ ಮಾಡಿಕೊಟ್ಟ ಅಗ್ರಿಮೆಂಟ್ ಮೊದಲಿನದ್ದೋ ಅಥವಾ 2ನೇ ಎದುರುದಾರರ 1ನೇ ಎದುರುದಾರರಿಗೆ ಪರವಾಗಿ ಮಾಡಿಕೊಟ್ಟ ಅಗ್ರಿಮೆಂಟ್ ಎಂದು ನನಗೆ ಗೊತ್ತಿಲ್ಲ. 2ನೇ ಎದುರುದಾರರ 1ನೇ ಎದುರುದಾರರಿಗೆ ಪರವಾಗಿ ಮಾಡಿಕೊಟ್ಟ ಅಗ್ರಿಮೆಂಟ್ ಮೊದಲಿನದ್ದು ಎಂದು ನನಗೆ ಗೊತ್ತಿದೆ ಅಂದರೆ ಗೊತ್ತಿಲ್ಲ.

6.ಮಧ್ಯಂತರ ಅರ್ಜಿ - 1ರ ಅಫ್ಟಿವಿಟ್‌ನಲ್ಲಿ ನ್ಯಾಯಾಲಯದ ವಿರುದ್ಧ ಆಕ್ಷೇಪಗಳನ್ನು ಮಾಡಿದ್ದೇನೆ ಅಂದರೆ ಇಲ್ಲ. ನನಗೆ ಕಚೇರಿಯಲ್ಲಿ ಓಡಾಡಿ ವ್ಯವಹಾರಿಕ ಜ್ಞಾನ ಇದೆ ಅಂದರೆ ಸರಿ.

7.ಡಿಗ್ರಿಗೆ ಸಂಬಂಧಪಟ್ಟ ದಾಖಲೆಗಳನ್ನು ಪಡೆಯಲು ಯಾಕೆ ವಿಳಂಬವಾಯಿತು, ಏನು ಕಾರಣ ಇತ್ತು ಎಂದು ಅಫಿಡವಿಟ್‌ನಲ್ಲಿ ತಿಳಿಸಿಲ್ಲ ಅಂದರೆ ನನಗೆ ಗೊತ್ತಿಲ್ಲ. ಈ ಕೇಸಿನಲ್ಲಿ ಯಾವುದೇ ಪರಿಹಾರ ಪಡೆಯಲು ಸಾಧ್ಯವಾಗುವುದಿಲ್ಲ ಎಂದು ಗೊತ್ತಾಗಿದ್ದರಿಂದ ಸುಳ್ಳು ಸಂಗತಿಗಳನ್ನು ಅಫಿಡವಿಟ್‌ನಲ್ಲಿ ಹೇಳಿದ್ದೇನೆ ಅಂದರೆ ಸರಿಯಲ್ಲ.

8.ಧೀರ್ಘಕಾಲಿಕ ವಿಳಂಬವಾಗಿದ್ದರಿಂದ ಅದನ್ನು ಮರೆಮಾಚಲು ನ್ಯಾಯಾಲಯದ ವಿರುದ್ಧ ಸುಳ್ಳು ಆಕ್ಷೇಪಗಳನ್ನು ಪ್ರಮಾಣಪತ್ರದಲ್ಲಿ ತಿಳಿಸಿದ್ದೇನೆ ಅಂದರೆ ಸರಿಯಲ್ಲ.

9.ನಿಪಿ.1 ರಿಂದ 5 ದಾಖಲೆಗಳನ್ನು ಈ ಅಫೀಲು ಮಾಡಿದ ನಂತರ ಪಡೆದುಕೊಂಡಿದ್ದೇನೆ ಅಂದರೆ ನನಗೆ ಗೊತ್ತಾದ ಮೇಲೆ ಈ ದಾಖಲೆಗಳನ್ನು ಪಡೆದುಕೊಂಡಿದ್ದೇನೆ. ನಿಪಿ.1 ರಿಂದ 5 ದಾಖಲೆಗಳನ್ನು ಪಡೆದುಕೊಳ್ಳುವುದಕ್ಕಿಂತ ಮೊದಲು ನಾನು ಸ್ವತಃ ನ್ಯಾಯಾಲಯಕ್ಕೆ ಹೋಗಿ ಸದರಿ ಕಾಫಿಗಳ ಸಲುವಾಗಿ ಅರ್ಜಿ ಹಾಕಿದ್ದೀರಾ ಅಂದರೆ ಇಲ್ಲ. ಆ ರೀತಿ ಅರ್ಜಿ ಹಾಕದೇ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

10. ನನ್ನ ಪ್ರಮಾಣಪತ್ರದಲ್ಲಿ ತಿಳಿಸಿರುವ ಸಂಗತಿಗಳು ಸುಳ್ಳು ಅಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ 14.12.2023**
**(ಸಾಕ್ಷಿಗೆ ಪ್ರಮಾಣವಚನ ಬೋದಿಸಲಾಯಿತು.)**
**ಆರ್ ಡಬ್ಲ್ಯೂ - 1**

**ಮುಖ್ಯ ವಿಚಾರಣೆ ಃ ಎದುರುದಾರ ಪರ ವಕೀಲರಿಂದ ಃ**

ಈ ದಿನ ನಾನು ನನ್ನ ಮುಖ್ಯವಿಚಾರಣೆಯ ಭಾಗವಾಗಿ ನನ್ನ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ.

ಎದುರುದಾರರ ಪರ ವಕೀಲರ ವಿನಂತಿಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ 26.03.2026**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಆರ್. ಡಬ್ಲ್ಯೂ - 1**

**ಪಾಟೀ ಸವಾಲು ಃ ಅರ್ಜಿದಾರರ ಪರ ಶ್ರೀಮತಿ.ಜೆ.ಡಿ., ವಕೀಲರಿಂದ ಃ**

ನನಗೆ ಮೇಲ್ಮನವಿದಾರರ ಪರಿಚಯ ಇರುವುದಿಲ್ಲ. ಈ ಪ್ರಕರಣ ದಾಖಲು ಮಾಡಿದ ನಂತರ ಮೇಲ್ಮನವಿದಾರ ನನಗೆ ಗೊತ್ತಾಗಿರುತ್ತಾನೆ. ಈಗ ಸುಮಾರು 15 ವರ್ಷದಿಂದ ನನಗೆ ಕ್ರಯ ಮಾಡಿಕೊಟ್ಟ ಟಿ.ದೇಸಯ್ಯ ಉ. ಮೆರವೇಗೌಡ ಗೊತ್ತಿರುತ್ತಾರೆ. ಸದರಿಯವರು ನನಗೆ ಮಾಮೂಲಿಯಾಗಿ ನನಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದರು. ಸದರಿ ನನ್ನ ಕ್ರಯದಾರರು ಮೇಲ್ಮನವಿದಾರರು ಕ್ರಯದ ಕರಾರು ಪತ್ರ ಮಾಡಿಕೊಟ್ಟ ವಿಚಾರ ನನಗೆ ಗೊತ್ತಿಲ್ಲ. 2015 ರಲ್ಲಿ ನಾನು ದಾವೆ ದಾಖಲು ಮಾಡಿದ್ದು ಅದರಲ್ಲಿ ಮೇಲ್ಮನವಿದಾರರನ್ನು ನಾನು ಪಾರ್ಟಿ ಮಾಡಿಲ್ಲ. ನಾನು ಸಲ್ಲಿಸಿದಂತಹ ಅಸಲು ದಾವಾ ಸಂ.185/16 ದಿಃ27.01.2016 ರಂದು ಡಿಕ್ರಿ ಆಗಿರುತ್ತದೆ. ಡಿಕ್ರಿಯಾದ ತಕ್ಷಣ ನಾನು ಜಾರಿ ಪ್ರಕರಣ 12/16 ನ್ನು ದಾಖಲು ಮಾಡಿರುತ್ತೇನೆ. ನನ್ನ ಕ್ರಯದಾರರು ನನಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟ ವಿಚಾರ ಮೇಲ್ಮನವಿದಾರರಿಗೆ ಗೊತ್ತಿಲ್ಲದೇ ಇರುವುದರಿಂದ ಸದರಿಯವರು ಅಸಲು ದಾವಾ ನಂ.67/2017 ದಾವೆ ದಾಖಲು ಮಾಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನಾನು ಯಾರ ವಿರುದ್ಧ ಡಿಕ್ರಿ ಪಡೆದುಕೊಂಡಿರುತ್ತೇನೋ ಅದೇ ಪ್ರಕಾರ ಮೇಲ್ಮನವಿದಾರರು ಅದೇ ವ್ಯಕ್ತಿಯ ವಿರುದ್ಧ ಡಿಕ್ರಿ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ಸದರಿ ಮೇಲ್ಮನವಿದಾರರು ಡಿಕ್ರಿ ಆದ ನಂತರ ಜಾರಿ 64/18 ಪ್ರಕರಣ ದಾಖಲು ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನ್ಯಾಯಾಲಯವು ನೋಂದಣಿ ಕ್ರಯ ಪತ್ರವನ್ನು ಮಾಡಿಸಿಕೊಳ್ಳಲು ಆದೇಶವಾಗಿದ್ದು, ಆ ಪ್ರಕಾರ ಸದರಿ ಅನುಸೂಚಿ ಆಸ್ತಿಯನ್ನು ನೋಂದಣಿ ಮಾಡಿಕೊಳ್ಳಲು ಮೇಲ್ಮನವಿದಾರರು ಹೋದಾಗ ಸದರಿ ಆಸ್ತಿ ನನಗೆ ಕ್ರಯ ಆದ ವಿಚಾರ ಮೇಲ್ಮನವಿದಾರರಿಗೆ ಗೊತ್ತಾಗಿರುತ್ತದೆ. ಈ ವಿಷಯ ಗೊತ್ತಾದ ನಂತರ ಮೇಲ್ಮನವಿದಾರರು ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡು ನನ್ನ ವಿರುದ್ದ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾನೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಈಗ ನನಗೆ ಗೊತ್ತಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಈ ಕಾರಣದಿಂದ ಮೇಲ್ಮನವಿದಾರರು ಈ

ಮೇಲ್ಮನವಿಯನ್ನು 1395 ದಿವಸ ತಡವಾಗಿ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ದುರುದ್ದೇಶ ಪೂರಕವಾಗಿ ಮೇಲ್ಮನವಿದಾರರು ನನ್ನ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದಂತಹ ದಾವೆಯಲ್ಲಿ ಮತ್ತು ಜಾರಿ ಪ್ರಕರಣದಲ್ಲಿ ಮೇಲ್ಮನವಿದಾರರ ಪಕ್ಷಗಾರನ್ನಾಗಿ ಮಾಡಿಲ್ಲದೇ ಇರುವುದರಿಂದ ನಾನು ಮಾಡಿದಂತಹ ಪ್ರಕರಣಗಳ ಬಗ್ಗೆ ಮೇಲ್ಮನವಿದಾರರಿಗೆ ಗೊತ್ತಿರುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಮೇಲ್ಮನವಿದಾರರು ಸದರಿ ಮೇಲ್ಮನವಿಯನ್ನು ಸಲ್ಲಿಸಲು ಕಾಲವಿಳಂಬದ ಬಗ್ಗೆ ನೀಡಿದಂತಹ ಕಾರಣಗಳು ಸೂಕ್ತವಾಗಿರುತ್ತದೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಎಂ.ಹೆಚ್. ಅಣ್ಣಯ್ಯನವರ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**